ಶ್ರೀ ಕೆ. ಬಾಬುರಾವ್ ಚಿಂಚನಸೂರ್ (ಮಾನ್ಯ ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು) :–

(ಅ) ಜವಳಿ (ಟೆಕ್ಸ್‌ಟೈಲ್ಸ್) ಪಾರ್ಕ್ ಪ್ರಾರಂಭಿಸಲು ಜವಳಿ ಉದ್ದಿಮೆದಾರರು ಎಸ್.ಪಿ.ವಿ. ರಚಿಸಿಕೊಂಡು ಕೈಗಾರಿಕೆಗೆ ಬೇಕಾದ ಜಮೀನನ್ನು ಹೊಂದಿದ್ದಲ್ಲಿ ಬೇಡಿಕೆ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

(ಆ) ಎಸ್.ಪಿ.ಬಿ.ಯು ಕಂಪನಿ ಹೆಸರಿನಲ್ಲಿ ಕೆ.ಐ.ಎ.ಡಿ.ಬಿ/ಕೆ.ಎಸ್.ಎಸ್.ಐ.ಡಿ.ಸಿ. ಜಮೀನು ಅಥವಾ ಕೈಗಾರಿಕಾ ಭೂಮಿಯನ್ನು ಖರೀದಿಸಬಹುದಾಗಿದೆ.

ಕರ್ನಾಟಕ ನೂತನ ಜವಳಿ ನೀತಿ (2013–18) ಯಡಿ ಜವಳಿ ಪಾರ್ಕ್ ಪ್ರಾರಂಭಿಸಲು ಮೂಲಭೂತ ಸೌಕರ್ಯಗಳನ್ನು ಒದಗಿಸಲು ವಲಯ–1ರಲ್ಲಿ ಯೋಜನಾ ವೆಚ್ಚದ ಶೇ.40 ರಷ್ಟು ಅಥವಾ ಗರಿಷ್ಠ ರೂ. 20.00 ಕೋಟಿ ಮತ್ತು ವಲಯ–2 ರಲ್ಲಿ ಶೇ–20 ರಷ್ಟು ಅಥವಾ ಗರಿಷ್ಠ ರೂ. 15–00 ಕೋಟಿವರೆಗೆ ಅವಕಾಶವಿದೆ.

(ಇ) ಹೌದು. ಜವಳಿ ಪಾರ್ಕ್‌ನಲ್ಲಿ ಜವಳಿ ಘಟಕಗಳ ಸ್ಥಾಪನೆಯಿಂದ ಉದ್ಯೋಗಾವಕಾಶಗಳು ದೊರೆಯಲಿವೆ.

ಕೌಶಲ್ಯ ತರಬೇತಿ ಕೇಂದ್ರಗಳು

26 (47) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ) :– ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ಹೊಸದಾಗಿ ಕೌಶಲ್ಯ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು ; (ವಿವರ ನೀಡುವುದು)

(ಇ) ಹಾಗಾದರೆ ತರಬೇತಿ ಕೇಂದ್ರ ಪ್ರಾರಂಭಕ್ಕೆ ಖರ್ಚು ಮಾಡಲಾಗುವ ಮೊತ್ತವೆಷ್ಟು ; ಯಾವ ಕಾಲಮಿತಿಯೊಳಗೆ ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಪಿ.ಟಿ. ಪರಮೇಶ್ವರ ನಾಯಕ್ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು) :–

(ಅ) ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ಹೊಸದಾಗಿ ಕೌಶಲ್ಯ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ.

(ಆ) ಅನ್ವಯಿಸುವುದಿಲ್ಲ.

(ಇ) ಅನ್ವಯಿಸುವುದಿಲ್ಲ.